ಹುಡುಗರ ಗುಂಪೊಂದು 'ಇಷ್ಟು ವರ್ಷಕ್ಕೆ ನಮ್ಮ ಕೇರಿ ಮೇಲೆ ದುರ್ಗವ್ವನ ಕರುಣೆ ಬಿತ್ತು ನೋಡ್ಲೇ' ಎಂದು ಹರುಷದಿಂದ ಕೂಗುತ್ತ ವಿಜಯ ಸಾಧಿಸಿದಂತೆ ಕುಣಿದಾಡಿದ್ರು. ಆದರೆ ಊರಿನ ಗೌಡ್ರು, ಗೊಂಚಿಕಾರರು 'ತಲಾ ತಲಾಂತರದಿಂದ ಮಾಡುತ್ತಿದ್ವ, ದುರ್ಗವ್ವನ ಚರಗಿ ಹೊತ್ತವನ ಖೂನಿಯನ್ನು, ಈ ವರ್ಷ ತಪ್ಪಿಸಿ ಬಿಟ್ಟರಲ್ಲೋ' ಎಂದು ಗುನುಗುಟ್ಟುತ್ತ, ಮಂಕು ಬಡಿದ ಮಂಗಗಳಂತೆ ಮುಖಮೋರೆ ತಿರುವಿಕೊಂಡು ಮನಿಕಡೆ ನಡೆದರು. ಅದರೆ ಹೊಲೇರ ಕೇರಿ ಜನರು 'ಸಂಕವ್ವನ ನಿಜ ಭಕ್ತಿಗೆ ಮೆಚ್ಚಿಯೇ ಬಿಟ್ಲು ನೋಡು ಜೋಡಿ ದುರ್ಗವ್ವ. ತನ್ನ ಗಂಡನಿಗೆ ಒಂದು ಹುಲ್ಲು ಕಡ್ಡಿ ಕಲ್ಕ್ ಅನ್ನದ ಹಾಗೇ ಕಾಪಾಡಿದಾಳೆ. ಅವಳ ಕಳಂಕನ್ನ ಇಂದಿಗೆ ದುರ್ಗವ್ವ ಪಾರುಮಾಡ್ಯಾಳೆ' ಎಂದು, ಅವರವರೇ ಪದಕಟ್ಟಿ ಹಾಡೋಕೆ ಶುರು ಮಾಡಿದ್ರು. ದುರ್ಗವ್ವನ ಕೋಪ ನೀಗಿಸಲು ಎಲ್ಲರೂ ಬೇಟೆ ಕಡಿಯುತ್ತ ಹಬ್ಬದ ಸಡಗರದಲ್ಲಿ ಮೈಮರೆತರು.

ಇತ್ತ ಗೌಡರು ಪ್ರತಿವರ್ಷ ಹಬ್ಬದಾಗೆ ಹೊಲೇರ ಕೇರಿ ಹೆಣ ಬಿದ್ದರೂ, ದುರ್ಗವ್ವನ ಮುಂದೆ ನಿಂತು ಹಬ್ಬ ಮಾಡುತ್ತಿದ್ದರು. ಆದರೆ ಈ ವರ್ಷ ತೋಟದಲ್ಲಿ ಚರಗದ ಬುಟ್ಟಿ ಹೊತ್ತವನನ್ನು ಹಿಂಬಾಲಿಸಿದ ಆ ನಾಲ್ಕು ಮಂದಿನ ಕರೆದು, 'ಏನ್ರೇಲೇ ದುರ್ಗವ್ವನ ಬಲಿ ಬಿಳಲ್ಲಿಲ್ಲಾಂದ್ರೇ, ನೀವು ನೀವೇ ಒಂದಾಗಿ ಏನೋ ನಡಿಸಿರಿ' ಎಂದು ಹೊಕ್ಕುರುಳಿನ ಸಿಟ್ಟಿನಿಂದ ಗೌಡ ಚಾಟಿ ತೆಗೆದು ನಾಲ್ಕು ಬಾರಿಸಿದಾಗ, ಅದರಲ್ಲೊಬ್ಬ 'ನಮ್ಮ ಕೈಗೆ ಅವ ಸಿಗ್ಲೇ ಇಲ್ಲಾ ಒಡೆಯ, ಇನ್ನೇಲ್ಲಿ ಅವ್ನ ದುರ್ಗಿಗೇ ಬಲಿ ಕೊಡಕಾಗೋದು ಹೇಳಿ ಬುದ್ಯಾರೇ' ಎಂದು ಭಯದಿಂದ ಹೇಳಿದನು. ಅಷ್ಟರಲ್ಲಿ ಊರಿನ ಜನರೆಲ್ಲಾ ಗೌಡ್ರ ತೋಟದಲ್ಲಿದ್ದ ದುರ್ಗವ್ವನ ಗುಡಿಗೆ ಆ ದೇವ್ರುನ್ನ ಗುಡಿ ತುಂಬಿಸಲು ದೌಡಾಯಿಸಿ ಬಂದೇಬಿಟ್ರು. ಆದರೆ ಗೌಡ್ರ ಮಾಡಸೋ ಖೂನಿಗಳನ್ನೆಲ್ಲ, ಈ ಸಾರಿ ಕರಿಯನೇ ತಪ್ಪಿಸಿದ್ದರಿಂದ, ದೇವ್ರು ಗುಡಿ ತುಂಬಿಸೋ ಕಾರ್ಯ ಕರಿಯನೇ ಮುಂದಾಳತ್ವ ವಹಿಸಿ ಮುಗಿಸಿಬಿಟ್ರು. ಇದನ್ನೆಲ್ಲಾ ತಿಳಿದ ಗೌಡ್ರು ಮೆಲ್ಲನೆ 'ಚರಗಬುಟ್ಟಿ ಹೊಲರ್ದ. ಆ ದುರ್ಗವ್ವ ಅವರ್ದೆ' ಎಂದು ಗರ ಬಡಿದವನಂತೆ ನಿಂತು, ನಿಂತಲ್ಲೇ ದುರ್ಗವ್ವನಿಗೆ ಕೈ ಜೋಡಿಸಿ ನೆಲಕ್ಕೆ ಉರುಳಿದ. ಅಂದು ಊರಿನ ಜನರೆಲ್ಲಾ ನಮ್ಮ ದುರ್ಗವ್ವ ಈ ವರ್ಷ ನಮ್ಮೂರು ಗೌಡ್ರನ್ನೇ ಬಲಿ ತೆಗೆದುಕೊಂಡ್ಲೂ ಎಂದು ಅಡಿಕೊಳ್ಳುವುದರ ಜೊತೆಗೆ 'ಇಷ್ಟು ವರ್ಷ ಚರಗದ ಬುಟ್ಟಿ ಹೊತ್ತೋದ್ವರನ್ನೆಲ್ಲಾ ಗೌಡ್ನೆ ಖೋನಿ ಮಾಡಿಸ್ಯಾನಂತೆ, ಗೌಡ್ರು ಮರ್ಮ ತಿಳಿದ ಕರಿಯ ದ್ಯಾವ್ರು ಮೈಮೇಲೆ ಬಂದೈತೆಂದು ಅವ್ರು ಕೈಗೆ ಸಿಗದಂಗಾ ಓಡ್ಯಾನೇ, ಅದುಕ್ಕೆ ಕರಿಯನ ಪ್ರಾಣನ ಆ ದುರ್ಗವ್ವ ಕಾಪಾಡ್ಯಳೆ' ಎಂಬ್ತಾ ಹೊಲೇರ ಕೇರಿಯೊಳಗೆ ಅಡ್ಡದಿಡ್ಡಿ ಕತೆಕಟ್ಟಿ ಮಾತಾಡುತ್ತಿದ್ರು.

ಕರಿಯ, ಸಂಕವ್ವ ಮಾತ್ರ ಇವರ ಕಥೆಗಳನ್ನು ನಂಬ್ದೆ ಜಾತ್ರಿ ಮುಗಿದ ಮರುದಿನ್ವೇ ಕೈಯಲ್ಲಿ ಬುತ್ತಿ ಹಿಡಿದುಕೊಂಡು, ಗೌಡ್ರ ಹೊಲಕ್ಕೆ ಹೋಗುತ್ತ 'ಮಳೆಯೊಂದೆ ಸರಿಯಾದ ಟೈಂಗೆ ಬಂದುಬಿಟ್ರೇ, ನಮ್ಮ ಧಣ್ಯಾರುಗೂ ಬಿಳಿಜ್ವೋಳ ಮನೆತುಂಬ್ತದೆ ನೋಡೆ ಸಂಕಿ, ಇನ್ನು ನಮ್ಮ ಜೀತನೂ ಅಲ್ಲಿಗೆ ಮುಗಿತದೆ' ಎಂದು ಹೇಳ್ತಾ, ಹಚ್ಚ ಹಸಿರಿನ ಜ್ವಾಳದ ಹೊಲದಲ್ಲಿ ಹುಲ್ಲು ಕಿತ್ತು ಬಂಡಿಗೆ ಹಾಕುತ್ತಿದ್ರು.

ಕರಿಯ ಸಂಕವ್ವನನ್ನು ನೋಡಿದ ಒಬ್ಬಜ್ಜ 'ಆ ಗೌಡ್ರು ಸತ್ರೂ ಇವರ ಜೀತ ಮುಗಿಲಿಲ್ಲ, ಆ ದುರ್ಗವ್ವ ಇವರ ಮನೆಗೆ ಬಂದ್ರೂ ಇವರ ಜೀತದಲ್ಲಿ ಭಾಗಿ ಆಗಲಿಲ್ಲ, ಮಳೆ ಬರಲಿಲ್ಲಾ ಜ್ವೋಳ ತೆನೆ ಬಿಡ್ಲಿಲ್ಲಾ, ಇವರಿಬ್ಬರ ಬದುಕು ಈ ಜೀತದಿಂದ ಪಾರಾಗಲಿಲ್ಲ. ನಾನು ಈ ಜೀವನ ಪೂರ್ತಿ ಗೌಡ್ರು ಜೀತದ ಲೆಕ್ಕದಾಗ ದುಡಿದೀನಿ. ಇವಾಗ ನಿಮ್ಮ ಸರತೀ ನೀವು ಕ್ಯಾಮೆ ಮಾಡ್ರೀ, ನಾನು ದೊಡ್ಡ ಗೌಡ್ರತಾವ, ನೀವು ಚಿಕ್ಕ ಗೌಡ್ರತಾವ... ಮುಂದಿನ ನಿಮ್ಮ ಐಕ್ಳು ಗತಿಯೆನೋ' ಎಂದು ತನ್ನ ಜೇಬಿನಿಂದ ಕೊರಕಲು ಸುಕ್ಕವನ್ನು ತೆಗೆದು ಬೆಂಕಿ ಹಚ್ಚಿ ನಿಟ್ಟುಸಿರು ಬಿಡುತ್ತ, ಮೋಡಗಳನ್ನೇ ದಿಟ್ಟಿಸಿ ನೋಡುತ್ತಿದ್ದಂತೆ, ಹೊಲೇರ ಕೇರಿ ಮೇಲಿದ್ದ ನಕ್ಷತ್ರಗಳು, ಜಾತ್ರಿ ಮುಗಿಸಿ ಗುಳೇ ಹೊಂಟಂತೆ ಹಸಿಬಸಿಯಲ್ಲಿ ನೋಡ್ತ ನೋಡ್ತನೇ ಉರಿ ಬಿಸಿಲಿನ ತಾಪಕ್ಕೆ ತಾಳ್ದೆ ನೆಲಕ್ಕೆ ಕುಸಿದ...!

●